# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 155 (185)

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ. ಎನ್. ರವಿ ಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 08.12.2020

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋರೋನ ಸಂಕ್ರಮಣ ಕಾಲದಲ್ಲಿ ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಾರರಿಗೆ ಸರ್ಕಾರ ಯಾವ ಯಾವ ಸೌಲಭ್ಯಗಳನ್ನು ನೀಡಿದೆ; | ಕೋರೋನ ಸಂಕ್ರಮಣ ಕಾಲದಲ್ಲಿ ತೋಟಗಾರಿಕೆ ಬೆಳೆಗಾರರಿಗೆ ಸರ್ಕಾರವು ಈ ಕೆಳಕಂಡ ಸೌಲಭ್ಯಗಳನ್ನು ನೀಡಿದೆ.<br>• Order No. AGRI-ACT/71/2020 Dated:02.04.2020ರನ್ವಯ ಅಗ್ರಿವಾರ್ ರೂಂ ಅನ್ನುರಾಜ್ಯ ಮಟ್ಟದಲ್ಲಿ ಸ್ಥಾಪಿಸಿದ್ದು, ಸಹಾಯ ವಾಣಿಗಳ ವ್ಯವಸ್ಥೆಯನ್ನು ಕಲ್ಪಿಸಿ ಕೃಷಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ರೈತರಿಗೆ ನೀಡಲಾಗಿದ್ದು, ಒಟ್ಟು 54,027 ಕರೆಗಳಿಗೆ ಉತ್ತರಿಸಿ ಮಾಹಿತಿಯನ್ನು ಒದಗಿಸಲಾಗಿರುತ್ತದೆ.<br>• ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೃಷಿಗೆ ಸಂಬಂಧಿಸಿದ ಎಲ್ಲಾ ಉತ್ಪಾದಕಗಳು ಹಾಗೂ ಅವಶ್ಯಕ ಸಾಮಗ್ರಿಗಳ ಸಾಗಾಣಿಕೆ ಪ್ರಕ್ರಿಯೆಗೆ ಪೂರ್ಣ ವಿನಾಯಿತಿ ನೀಡಲಾಗಿದ್ದು, ಕೃಷಿ ಉತ್ಪನ್ನಗಳ ಸಾಗಾಣಿಕೆಗೆ GREEN PASS ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.<br>• ಸರಬರಾಜು ಸರಪಳಿಯ ವಿವಿಧ ಹಂತದ ಮಧ್ಯಸ್ಥಿಕೆ ಕ್ರಮಗಳಿಗೆ ಬೇಕಾದ ಮಾರ್ಗದರ್ಶನ ಮತ್ತು ಮಾಹಿತಿ ಸಂವಹನೆಗಾಗಿ ವಿವಿಧ ಸಮಿತಿ ರಚಿಸಲಾಗಿರುತ್ತದೆ.<br>• Order No. AGRI-ACT/71/2020 Dated:02.04.2020ರನ್ವಯ ಕೃಷಿ ಆಯುಕ್ತಾಲಯದಲ್ಲಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಪ್ರಾರಂಭಿಸಿದ್ದು, ರೈತರ ಮತ್ತು ಇತರೆ ಸಂಬಂಧಿಸಿದ ವ್ಯವಸ್ಥೆಗಳ ಅಹವಾಲುಗಳನ್ನು ಸ್ವೀಕರಿಸಿ ಅವುಗಳಿಗೆ ಸ್ಪಂದಿಸಿ ಅಗತ್ಯ ಮಾಹಿತಿ ಒದಗಿಸಲಾಗಿರುತ್ತದೆ.<br>• ಜಿಲ್ಲಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ತೋಟಗಾರಿಕೆ ಇಲಾಖೆವತಿಯಿಂದ ಹಣ್ಣು/ ತರಕಾರಿ ಮಾರುಕಟ್ಟೆ ಹಾಗೂ ಗ್ರಾಹಕರಿಗೆ ಲಭ್ಯವಾಗುವ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.<br>• ಸ್ಥಗಿತವಾಗಿದ್ದ ಎಪಿಎಂಸಿ, ಸಗಟು ಹಾಗೂ ಚಿಲ್ಲರೆ ವ್ಯಾಪಾರಸ್ಥರ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲಾಗಿರುತ್ತದೆ. |

| | | |
|---|---|---|
| | | • ರಾಜ್ಯದೊಳಗಿನ ಮತ್ತು ಇತರೆ ರಾಜ್ಯಗಳಲ್ಲಿ ಹಣ್ಣು / ತರಕಾರಿ ವಹಿವಾಟು ನಡೆಸುವ ಖರೀದಿದಾರರ ಪಟ್ಟಿ ಮತ್ತು ಎಪಿಎಂಸಿ ವತಿಯಿಂದ ನೋಂದಾಯಿಸಲ್ಪಟ್ಟಿರು ವವ್ಯಾಪಾರಸ್ಥರ ಪಟ್ಟಿಯನ್ನು ಪಡೆದು, ಅವರುಗಳನ್ನು ದೂರವಾಣಿ ಮುಖೇನ ಸಂಪರ್ಕಿಸಿ, ಬೆಳೆಗಾರರೊಂದಿಗೆ ಸಂಪರ್ಕ ಕಲ್ಪಿಸಲಾಗಿರುತ್ತದೆ. ಸದರಿ ಕಾರ್ಯವು ರಾಜ್ಯ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ನಿರಂತರವಾಗಿ ನೀಡಲಾಗಿರುತ್ತದೆ.<br>• Order No. RD 158 TNR 2020 Dated:25.03.2020ರನ್ವಯ ರಾಜ್ಯದ ಗಡಿಗಳಲ್ಲಿ ಇತರೆ ರಾಜ್ಯಗಳೊಂದಿಗಿನ ಚೆಕ್ ಪೋಸ್ಟ್ ಗಳನ್ನು ಮುಕ್ತಗೊಳಿಸಿ, ಆಯಾ ರಾಜ್ಯಗಳ ಸರ್ಕಾರಗಳೊಂದಿಗೆ ಸಮಾಲೋಚಿಸಿ ಅಂತರ ರಾಜ್ಯ ಹಣ್ಣು/ ತರಕಾರಿಗಳ ಸಾಗಾಣಿಕೆ ವ್ಯವಸ್ಥೆಯನ್ನು ಸುಗಮಗೊಳಿಸಲಾಗಿರುತ್ತದೆ.<br>• ರಾಜ್ಯದಲ್ಲಿ ಸ್ಥಗಿತಗೊಂಡಿದ್ದ ಹಣ್ಣು ಮತ್ತು ತರಕಾರಿಗಳ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿ ಹಣ್ಣು / ತರಕಾರಿಗಳ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿರುತ್ತದೆ. ಒಟ್ಟು 75 ಸಂಸ್ಕರಣಾ ಘಟಕಗಳು ದಿನನಿತ್ಯ 1950 ಮೆ.ಟನ್ನಳಷ್ಟು ತರಕಾರಿ (ಟೊಮೆಟೋ, ಖರಬೂಜ, ಕಲ್ಲಂಗಡಿ, ಕೋಸು ಇತ್ಯಾದಿ) ಮತ್ತು ಹಣ್ಣಿನ (ಮಾವು, ಸೀಬೆ, ದ್ರಾಕ್ಷಿ, ಪಪ್ಪಾಯ, ಹುಣಸೇಇತ್ಯಾದಿ) ಉತ್ಪಾದನೆಯನ್ನು ಖರೀದಿಸಿ ಸಂಸ್ಕರಿಸಲಾಗಿದೆ.<br>• ರಾಜ್ಯದ ಬಹುತೇಕ ಎಲ್ಲಾ ಶೀಥಲೀಕರಣ ಘಟಕಗಳನ್ನು ಪ್ರಾರಂಭಿಸಿ, ಸದರಿ ಘಟಕಗಳಲ್ಲಿ ತೋಟಗಾರಿಕೆ ಉತ್ಪಾದನೆಯನ್ನು ಶೇಖರಿಸಲು ರೈತರಿಗೆ ತಿಳುವಳಿಕೆ ಮೂಡಿಸಲಾಗಿರುತ್ತದೆ.<br>• ಜಿಲ್ಲಾಡಳಿತ, ನಗರ/ ಪಟ್ಟಣ ಸ್ಥಳೀಯ ಸಂಸ್ಥೆಗಳು ಮತ್ತು ಇತರೆ ಅಭಿವೃದ್ಧಿ ಇಲಾಖೆಗಳ (ಕೃಷಿ, ಕೃಷಿ ಮಾರುಕಟ್ಟೆಇತ್ಯಾದಿ) ಸಹಯೋಗದಲ್ಲಿ ಆಸಕ್ತ ಸ್ವಯಂ ಸೇವಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳ ಮತ್ತು ಅಪಾರ್ಟ್ಮೆಂಟ್ ವ್ಯವಸ್ಥಾಪಕರ ಸೇವೆಯನ್ನು ಪಡೆದು ರೈತರು ಉತ್ಪಾದಿಸಿದ ಹಣ್ಣು / ತರಕಾರಿಯನ್ನು ಗ್ರಾಹಕರಿಗೆ, ಮನೆಮನೆಗಳಿಗೆ ತಲುಪಿಸಲಾಗಿರುತ್ತದೆ.<br>• ಇಲಾಖೆಯ ಸಹಯೋಗದಲ್ಲಿ 132 ನಿಯಂತ್ರಣ ಕೊಠಡಿ / ಸಹಾಯವಾಣಿಗಳನ್ನು ಕಾರ್ಯಚಾಲನೆಗೊಳಿಸಲಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಕರೆಗಳನ್ನು ಸ್ವೀಕರಿಸಿ ರೈತರಿಗೆ ಅವರು ಉತ್ಪಾದಿಸಿದ ಹಣ್ಣು / ತರಕಾರಿ ಮಾರುಕಟ್ಟೆ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಲಾಗಿರುತ್ತದೆ.<br>• ದಿನಾಂಕ:23.03.2020 ರಿಂದ ದಿ:24.05.2020 ರವರೆಗಿನ ಅವಧಿಯಲ್ಲಿ ಹೆಚ್ಚಿನ ಹಣ್ಣು / ತರಕಾರಿಯನ್ನು ಹಾಪ್ ಕಾಮ್ಸ್, ರೈತ |

ಉತ್ಪಾದಕ ಸಂಸ್ಥೆಗಳ, ವಿವಿಧ ಸಂಘ ಸಂಸ್ಥೆಗಳ ಮುಖಾಂತರ ಮಾರಾಟಮಾಡಲು ಇಲಾಖೆಯವತಿಯಿಂದ ಕೈ-ಜೋಡಿಸಿರುತ್ತದೆ.

- ಕೋವಿಡ್ ಲಾಕ್ ಡೌನ್ ಅವಧಿಯಲ್ಲಿ ನಷ್ಟಕ್ಕೊಳಗಾದ ಹೂವಿನ ಬೆಳೆಗಾರರಿಗೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.25000/- ಗಳಂತೆ ಈವರೆಗೂ ರೂ. 15.16 ಕೋಟಿಗಳನ್ನು ಪರಿಹಾರಧನವಾಗಿ ಒಟ್ಟು 21,196 ರೈತರಿಗೆ ವಿತರಿಸಲಾಗಿದೆ. ಬಾಕಿ ಮೊತ್ತಕ್ಕೆ ಕ್ರಮವಹಿಸಲಾಗಿದೆ.
- ತೀವ್ರತರವಾಗಿ ನಷ್ಟಕ್ಕೊಳಗಾದ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಹೆಕ್ಟೇರ್ ಗೆ ಗರಿಷ್ಠ ರೂ.15,000/- ಗಳಂತೆ ಈವರೆಗೂ ರೂ. 57.59 ಕೋಟಿಗಳನ್ನು ಪರಿಹಾರಧನವಾಗಿ ಒಟ್ಟು 71,778 ರೈತರ ಖಾತೆಗೆ ನೇರವಾಗಿ DBT ಮುಖಾಂತರ ಪರಿಹಾರಧನ ವಿತರಿಸಲಾಗಿದ್ದು, ಬಾಕಿ ಮೊತ್ತಕ್ಕೆ ಕ್ರಮವಹಿಸಲಾಗಿದೆ.

ರೇಷ್ಮೆ ಇಲಾಖೆಯು ರೇಷ್ಮೆ ಭಾಗೀದಾರರಿಗೆ ಸಹಾಯಧನ ಹಾಗೂ ಪ್ರೋತ್ಸಾಹಧನ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು ಉತ್ತೇಜನ ನೀಡಲಾಗುತ್ತಿದೆ.

ಮುಂದುವರೆದು, ಕೋವಿಡ್-19 ಮಹಾಮಾರಿ ಖಾಯಿಲೆಯಿಂದ ಉಂಟಾದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ, ರೀಲರುಗಳಿಗೆ ಕಚ್ಚಾ ರೇಷ್ಮೆ ಮೇಲೆ ಒತ್ತೆ ಸಾಲ ನೀಡಲು ಹಾಗೂ ಕಚ್ಚಾ ರೇಷ್ಮೆಯನ್ನು ಖರೀದಿಸಲು ಸರ್ಕಾರವು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ರೂ.2000.00 ಲಕ್ಷಗಳ ಅನುದಾನ ಬಿಡುಗಡೆ ಮಾಡಿತ್ತು. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಖಾತೆಯಲ್ಲಿದ್ದ ಪ್ರಾರಂಭಿಕ ಶಿಲ್ಕು ರೂ.750.00 ಲಕ್ಷಗಳು ಹಾಗೂ ಸರ್ಕಾರವು ಬಿಡುಗಡೆ ಮಾಡಿದ್ದ ರೂ.2000.00 ಲಕ್ಷಗಳನ್ನು ಸೇರಿದಂತೆ ಒಟ್ಟಾರೆ ರೂ.2750.00 ಲಕ್ಷಗಳನ್ನು 2181 ರೀಲರುಗಳಿಗೆ ಕಚ್ಚಾ ರೇಷ್ಮೆ ಮೇಲೆ ಒತ್ತೆ ಸಾಲವಾಗಿ ನೀಡಿದೆ ಮತ್ತು ರೀಲರುಗಳ ಕಚ್ಚಾ ರೇಷ್ಮೆಯನ್ನು ಖರೀದಿಸಲಾಗಿದೆ.

ಮುಂದುವರೆದು, ರೇಷ್ಮೆ ಗೂಡಿನ ಧಾರಣೆಗಳಲ್ಲಿ ತೀವ್ರ ಕುಸಿತ ಉಂಟಾಗಿ ರೇಷ್ಮೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದರಿಂದ ಸರ್ಕಾರವು ರೇಷ್ಮೆ ಗೂಡಿಗೆ ಪ್ರೋತ್ಸಾಹಧನವನ್ನು ವಿತರಿಸಲು ರೂ.3000.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ರೂ.2172.00 ಲಕ್ಷಗಳನ್ನು ಗೂಡಿನ ಪ್ರೋತ್ಸಾಹಧನ ವನ್ನು 38,050 ರೇಷ್ಮೆ ಬೆಳೆಗಾರರಿಗೆ ಪಾವತಿಸಲಾಗಿದೆ. ಉಳಿದ ರೂ.828.00 ಲಕ್ಷಗಳ ಪ್ರೋತ್ಸಾಹಧನವನ್ನು ವಿತರಿಸಲು ಕ್ರಮ ವಹಿಸಲಾಗುತ್ತಿದೆ.

| | | |
|---|---|---|
| ಆ | ರಾಜ್ಯದಲ್ಲಿ ಕಳೆದ 6 ತಿಂಗಳಿನಲ್ಲಿ ಬೆಳೆದ ತೋಟಗಾರಿಕಾ ಬೆಳೆಗಳಿಗೆ ಸಮರ್ಪಕವಾದ ಮಾರುಕಟ್ಟೆ ಒದಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯದಲ್ಲಿ ಕೋವಿಡ್ ಲಾಕ್ ಡೌನ್ ಅವಧಿಯನ್ನೊಳಗೊಂಡಂತೆ ಕಳೆದ 6 ತಿಂಗಳಿನಲ್ಲಿ ಬೆಳೆದ ತೋಟಗಾರಿಕಾ ಬೆಳೆಗಳಿಗೆ ಸಮರ್ಪಕವಾದ ಮಾರುಕಟ್ಟೆ ಒದಗಿಸುವಲ್ಲಿ ಸರ್ಕಾರವು ಈ ಕೆಳಕಂಡಂತೆ ಕ್ರಮವಹಿಸಿದೆ.<br>• ರೈತರಿಗೆ ನೆರವಾಗಲು ರೈತರು ಬೆಳೆದ ಹೂವು, ಹಣ್ಣು ಮತ್ತು ತರಕಾರಿಗಳನ್ನು, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ, ಬೆಂಗಳೂರು ರವರ ಸಹಯೋಗದೊಂದಿಗೆ ಕೆ.ಎಂ.ಎಫ್. ಮಳಿಗೆಗಳ ಆವರಣದಲ್ಲಿ ಹೂವು, ಹಣ್ಣು ಮತ್ತು ತರಕಾರಿಗಳನ್ನು ನೇರ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಬೆಂಗಳೂರಿನಲ್ಲಿ ಇರುವ 220 ಹಾಪ್ ಕಾಮ್ಸ್ ಮಾರಾಟ ಮಳಿಗೆಗಳು ಹಾಗೂ 40 ಮೊಬೈಲ್ ವ್ಯಾನ್ ಗಳ ಮೂಲಕ ರೈತರಿಂದ ಖರೀದಿಸಿದ ಹಣ್ಣು / ತರಕಾರಿಗಳನ್ನು ಮಾರಾಟ ಮಾಡಲಾಗಿರುತ್ತದೆ.<br>• ಬೆಂಗಳೂರು ಹಾಪ್ ಕಾಮ್ಸ್ ನ್ನು ಹೊರತುಪಡಿಸಿ, 22 ಜಿಲ್ಲಾ ಹಾಪ್ ಕಾಮ್ಸ್ ಗಳ ಮುಖಾಂತರ 225 ಮಾರಾಟ ಮಳಿಗೆಗಳು ಹಾಗೂ 262 ಮೊಬೈಲ್ ವ್ಯಾನ್ ಗಳ ಮೂಲಕ ರೈತರಿಂದ ಖರೀದಿಸಿದ ಹಣ್ಣು / ತರಕಾರಿಗಳನ್ನು ಮಾರಾಟ ಮಾಡಲಾಗಿರುತ್ತದೆ.<br>• ರಾಜ್ಯದಲ್ಲಿನ ರೈತ ಉತ್ಪಾದಕ ಸಂಸ್ಥೆಯಿಂದ 114 ಮೊಬೈಲ್ ವ್ಯಾನ್ ಗಳ ಮೂಲಕ ರೈತರಿಂದ ಖರೀದಿಸಿದ ಹಣ್ಣು / ತರಕಾರಿಗಳನ್ನು ಮಾರಾಟ ಮಾಡಲಾಗಿರುತ್ತದೆ.<br>• ರಾಜ್ಯದಲ್ಲಿನ ಇತರೆ ಸರ್ಕಾರೇತರ ಸಂಸ್ಥೆಗಳಿಂದ 193 ಮೊಬೈಲ್ ವ್ಯಾನ್ ಗಳ ಮೂಲಕ ರೈತರಿಂದ ಖರೀದಿಸಿದ ಹಣ್ಣು / ತರಕಾರಿಗಳನ್ನು ಮಾರಾಟ ಮಾಡಲಾಗಿರುತ್ತದೆ.<br>• ಸಂಪೂರ್ಣ ಲಾಕ್ ಡೌನ್ ನಲ್ಲಿ ಹಬ್ಬ ಹಾಗೂ ರಜಾ ದಿನಗಳಲ್ಲಿ ಹಾಪ್ ಕಾಮ್ಸ್ ಮಾರಾಟ ಮಳಿಗೆಗಳು ಕಾರ್ಯ ನಿರ್ವಹಿಸಿರುತ್ತವೆ.<br>• ಬೆಂಗಳೂರು ಹಾಪ್ ಕಾಮ್ಸ್ ಸಂಘದವತಿಯಿಂದ ದಿನವಹಿ, 95 ರಿಂದ 100 ಟನ್ ಹಣ್ಣು / ತರಕಾರಿಗಳನ್ನು ಮಾರಾಟ ಮಾಡಲಾಗಿರುತ್ತದೆ. ಲಾಕ್ ಡೌನ್ ಪೂರ್ವದಲ್ಲಿ 50 ಟನ್ ಗಳಷ್ಟು ಹಣ್ಣು / ತರಕಾರಿಗಳ ವಹಿವಾಟು ನಡೆಯುತ್ತಿತ್ತು<br>• ಮಾರುಕಟ್ಟೆ ದರಕ್ಕಿಂತ ಪ್ರತಿ ಕೆ.ಜಿ ಗೆ ರೂ.3 ರಿಂದ ರೂ.4 ಗಳನ್ನು ಹೆಚ್ಚಿಗೆ ನೀಡಿ ರೈತರಿಂದ ಹಣ್ಣು / ತರಕಾರಿಗಳನ್ನು ಖರೀದಿಸಲಾಗಿರುತ್ತದೆ.<br>• ಬೆಂಗಳೂರು ನಗರದಲ್ಲಿ ಇನ್ನೂ ಹೆಚ್ಚಿನ ಮೊಬೈಲ್ ವ್ಯಾನ್ ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಗ್ರಾಹಕರಿಗೆ ಮನೆ ಬಾಗಿಲಿಗೆ ಹಣ್ಣು / ತರಕಾರಿ ಒದಗಿಸಲು ಕ್ರಮವಹಿಸಲಾಗಿರುತ್ತದೆ. |

| | | |
|---|---|---|
| | | • ಬೆಂಗಳೂರು ನಗರವನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿಯೂ ಮೊಬೈಲ್ ವ್ಯಾನ್ ಗಳ ಮೂಲಕ ಗ್ರಾಹಕರಿಗೆ ಮನೆ ಬಾಗಿಲಿಗೆ ಹಣ್ಣು/ ತರಕಾರಿ ಒದಗಿಸಲು ಕ್ರಮವಹಿಸಲಾಗಿರುತ್ತದೆ.<br><br>ಕೋವಿಡ್ ಲಾಕ್ ಡೌನ್ ನಂತರದ ಅವಧಿಯಲ್ಲಿ ರಾಜ್ಯ, ಹೊರ ರಾಜ್ಯ ಹಾಗೂ ರಫ್ತು ವ್ಯಾಪಾರ ವಹಿವಾಟು ಸಕ್ರಿಯವಾಗಿ ಪ್ರಾರಂಭಗೊಂಡಿದೆ. |

ಸಂ: HORTI/480/HGM/2020-admn-Horti-Sec

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ

ಮತ್ತು ರೇಷ್ಮೆ ಸಚಿವರು